## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.

## ಸಿ.ಸಿ ಸಂಖ್ಯೆಃ 1096/2020

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಚನ್ನೇಗೌಡ. ಆರ್.ಜಿ. | ಸಿಡಬ್ಲ್ಯೂ-18 |
| ತಂದೆಯ/ಗಂಡನ ಹೆಸರು | – | ಗಂಗಪ್ಪ | ಪಿಡಬ್ಲ್ಯೂ-8 |
| ವಯಸ್ಸು | – | ಸು. 45 ವರ್ಷ | ಪ್ರ.ವ.ಬೋ ದಿನಾಂಕಃ28.02.2025 |
| ಉದ್ಯೋಗ | – | ಆರಕ್ಷಕ ನಿರೀಕ್ಷಕರು, ನಗರ ಗುಪ್ತ ಶಾಖೆ, ಬೆಂಗಳೂರು ನಗರ | |
| ವಾಸ | – | ಬೆಂಗಳೂರು ನಗರ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-**

ನಾನು ದಿನಾಂಕಃ05.03.2019 ರಿಂದ ದಿನಾಂಕಃ 09.03.2020 ರವರೆಗೆ ಹಿರಿಯೂರು ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ28.05.2019 ರಂದು ಚಾಸಾ-17 ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ಅದೇ ದಿನ ಮೋಟಾರ್ ಸೈಕಲ್ ಸಂಖ್ಯೆಃ MH-14-GU-8042- ಈಚರ್ ಲಾರಿ ಐ ಎಂ ವಿ ತಪಾಸಣೆಗೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಸದರಿ ವಾಹನದ ಆ‌ರ್ ಸಿ ಮಾಲೀಕರಾದ ಚಾಸಾ-11 ರವರಿಗೆ ನೋಟೀಸ್ ನೀಡಿ ಅದಕ್ಕೆ ಉತ್ತರವನ್ನು ಪಡೆದಿರುತ್ತೇನೆ. ಉತ್ತರದಲ್ಲಿ ಅಪಘಾತ ನಡೆದ ದಿನ ಲಾರಿಯನ್ನು ಆರೋಪಿ ಸಂತೋಷ್ ತಂಡಲೇ ಚಾಲನೆ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಅದೇ ದಿನ ಚಾಸಾ-11 ರವರಿಂದ ನಷ್ಟಭರ್ತಿ ಬಾಂಡ್ ನ್ನು ಪಡೆದು ಸದರಿ ವಾಹನವನ್ನು ಚಾಸಾ-11 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ 133 ನೋಟೀಸ್, ರಿಪ್ಲೇ, ನಷ್ಟಭರ್ತಿ ಬಾಂಡ್ ನ್ನು ಕ್ರಮವಾಗಿ **ನಿಪಿ-8, 9, 10** ಎಂದು ಸಾಕ್ಷಿಯ ಸಹಿಗಳನ್ನು

**ನಿಪಿ–8(ಎ), 9(ಎ) ಮತ್ತು ನಿಪಿ–10(ಎ)** ಎಂದು ಗುರುತಿಸಲಾಯಿತು. ಈ ಪ್ರಕರಣದ ಆರೋಪಿ ಠಾಣೆಗೆ ಬಂದು ಹಾಜರಾಗಿ ತನ್ನ ತಪ್ಪು ಒಪ್ಪಿಕೊಂಡಿದ್ದರಿಂದ ಅವರ ವಿರುದ್ಧ ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

(ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ).

ಅದೇ ದಿನ ಚಾಸಾ–1 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ಹಾಗೂ ಚಾಸಾ–2 ಮತ್ತು 3 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ15.10.2019 ರಂದು ಚಾಸಾ–14 ರವರಿಂದ ನಿಪಿ–6 ರಂತೆ ಐ ಎಂ ವಿ ವರದಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ನಿಪಿ–6 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–**6(ಎ)** ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ–15 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ22.10.2019 ರಂದು ದಾವಣಗೆರೆ ಎಸ್ ಎಸ್ ಆಸ್ಪತ್ರೆಯಿಂದ ಚಾಸಾ–12 ರವರಿಂದ ನಿಪಿ–5 ರಂತೆ ಮೃತ ಸುರೇಶ್ ಅವರ ಶವ ತನಿಖಾ ವರದಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ನಿಪಿ–5 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–**5(ಎ)** ಎಂದು ಗುರುತಿಸಲಾಯಿತು.

ದಿಃ24.01.2020 ರಂದು ಚಾಸಾ–14 ರವರಿಂದ ಕರ್ತವ್ಯ ಧೃಢೀಕರಣ ಪತ್ರವನ್ನು ಪಡೆದಿರುತ್ತೇನೆ. ಸಾಕ್ಷಿಯು ಕರ್ತವ್ಯ ಧೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ–11** ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು **ನಿಪಿ–11(ಎ)** ಎಂದು ಗುರುತಿಸಲಾಯಿತು.

ಚಾಸಾ–17 ರವರ ಸಹಿ ಮತ್ತು ಹಸ್ತಾಕ್ಷರವನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ–17 ರವರು ಮೃತ ಪಟ್ಟಿದ್ದು, ಸಾಕ್ಷಿಯು ನಿಪಿ–1 ರಲ್ಲಿರುವ ಚಾಸಾ–17 ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–2 ಮತ್ತು 3

ರಲ್ಲಿರುವ ಚಾಸಾ–17 ರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–2(ಡಿ) ಮತ್ತು 3(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ– 7 ರಲ್ಲಿರುವ ಚಾಸಾ–17 ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–7(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯುಪ್ರಥಮ ವರ್ತಮಾನ ವರಿದಿ ಮತ್ತು ಮಾಲು ಪಟ್ಟಿಯಲ್ಲಿರುವ ಚಾಸಾ–17 ರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–12 ಮತ್ತು 13** ಎಂದು, ಸಾಕ್ಷಿಯ ಸಹಿಗಳನ್ನು **ನಿಪಿ–12(ಎ) ಮತ್ತು** 13(ಎ) ಎಂದು ಗುರುತಿಸಲಾಯಿತು

ಪ್ರಕರಣದಲ್ಲಿ ಆರೋಪಿತನ ವಿರುದ್ಧ ದೋಷಾರೋಪ ಸಿದ್ದವಾಗಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ಆರೋಪಿತನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ.ಎ ಆರ್ ವೈ ವಕೀಲರಿಂದಃ–**

ಚಾಸಾ–17 ರವರಿಂದ ಈ ಪ್ರಕರಣದ ಕಡತವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ–17 ರವರ ಸಹಿ ಮತ್ತು ಹಸ್ತಾಕ್ಷರವನ್ನು ನನಗೆ ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಐ.ಎಂ.ವಿ ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಆರೋಪಿ ವಿರುದ್ಧ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.